ಏನು ಶಿಕ್ಷೆ ಎಂಬುದು ಇಲ್ಲಿ ಇಲ್ಲ. ಕಳಪೆ ಗುಣಮಟ್ಟವನ್ನು ಸಕ್ರಮ ಮಾಡತಕ್ಕಂಥ ವ್ಯವಸ್ಥೆ ಈ ಒಂದು ಕಾರ್ಯಕ್ರಮದಲ್ಲಿ ಆಗುತ್ತದೆ. ಆದ್ದರಿಂದ ಯಾರು ಈ ಕಳಪೆಗೆ ಸರ್ಟಿಫಿಕೇಟ್ ಕೊಡುತ್ತಾರೆ, ಯಾರು ಕಳಪೆ ಉತ್ಪಾದನೆ ಮಾಡುತ್ತಾರೆ, ಅವರ ಮೇಲೆ ತಾವು ಏನು ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಪ್ರಶ್ನೆ ಇದೆ. ಆದ್ದರಿಂದ ಸರ್ಟಿಫಿಕೇಟ್ ಕೊಡತಕ್ಕಂಥ ಅಧಿಕಾರಿಗಳ ಮೇಲೆ ತಾವು ಎನು ಕ್ರಮ ತೆಗೆದುಕೊಂಡಿದ್ದೀರಿ? ಕಳಪೆ ಎಂದು ಹೇಳಿ ದುಡ್ಡನ್ನು ವಾಪಾಸ್ಸು ಕೊಡಿಸಿದ್ದೀರಿ. ಆದರೆ ಕಳಪೆಗೆ ಸರ್ಟಿಫಿಕೇಟ್ ಕೊಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೀರಾ ಎನ್ನತಕ್ಕಂಥಾದ್ದು ನಮ್ಮ ಪ್ರಶ್ನೆ.

ಶ್ರೀ ಬಿ. ಎ. ಮೊಯ್ದಿನ್ : ನಿರ್ದಿಷ್ಟವಾದಂಥ ಯಾವುದಾದರೂ ಉದಾಹರಣೆ ಕೊಟ್ಟರೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಸಮ್ಮನೆ ಇರುವುದಿಲ್ಲ.

ವಿಷಯ : ರಾಜ್ಯದಲ್ಲಿ ಜೆಲ್ಲಿ ಕ್ರಷರ್‌ಗಳಿಗೆ ಅನುಮತಿ

232 (1984)-ಶ್ರೀ ಎಂ ಪಿ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಜೆಲ್ಲಿ ಕ್ರಷರ್‌ಗೆ ಅನುಮತಿ ನೀಡಲು ಯಾವ ಯಾವ ನಿಯಮಗಳನ್ನು ಪಾಲನೆ ಮಾಡಲಾಗುವುದು.

ಆ) ಕೊಡಗು ಜಿಲ್ಲೆಗೆ ಎಷ್ಟು ಕ್ರಪರ್‌ಗಳಿಗೆ ಅನುಮತಿ ನೀಡಲಾಗಿದೆ; ಅವು ಯಾವುವು

ಇ) ಸೋಮವಾರ ಪೇಟೆ ತಾಲ್ಲೂಕಿನ ಸುಂಟಿ ಕೊಪ್ಪನಾಡಿನ ಅಂದಗೊವಯಲ್ಲಿ ಎಷ್ಟು ಜೆಲ್ಲಿ ಕ್ರಷರ್‌ಗಳಿಗೆ ಅನುಮತಿ ಕೊಡಲಾಗಿದೆ?

ಶ್ರೀ ಬಿ. ಎ. ಮೊಹಿದೀನ್ (ಸಣ್ಣ ಕೈಗಾರಿಕಾ ಸಚಿವರು)

ಅ) ಜೆಲ್ಲಿ ಕ್ರಪರ್‌ಗಳನ್ನು ಸ್ಥಾಪಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಶಾಶ್ವತ ನೋಂದಣಿ ಪ್ರಮಾಣ ಪತ್ರಗಳನ್ನು ನೀಡುತ್ತಿದೆ. ಶಾಶ್ವತ ನೋಂದಣಿ ಪ್ರಮಾಣ ಪತ್ರಗಳನ್ನು ನೀಡುವಾಗ ಇಲಾಖೆಯು ನಿಗದಿ ಪಡಿಸಿದ ದಾಖಲಾತಿಗಳೊಂದಿಗೆ ಗಣಿ ಮತ್ತು ಭೂಗರ್ಭ ಇಲಾಖೆಯ ಕ್ವಾರಿ ಪರವಾನಿಗೆ ಅಥವಾ ಬೇರೊಬ್ಬರು ಪರವಾನಿಗೆವುಳ್ಳವರೊಂದಿಗೆ ಸಣ್ಣ ಕೈಗಾರಿಕೆ ಘಟಕದವರು ಕಚ್ಚಾ ಮಾಲು ಸರಬರಾಜು ಕರಾರು ಪತ್ರ ಮಾಡಿಕೊಂಡಲ್ಲಿ ಶಾಶ್ವತ ನೋಂದಣಿ ಪ್ರಮಾಣ ಪತ್ರಗಳನ್ನು ನೀಡಲಾಗುವುದು.

ಆ) ಕೊಡಗು ಜಿಲ್ಲೆಯಲ್ಲಿ 9 ಜೆಲ್ಲಿ ಕ್ರಪರ್‌ಗಳಿಗೆ ಅನುಮತಿ ನೀಡಲಾಗಿದೆ. ಪಟ್ಟಿ ಲಗತ್ತಿಸಲಾಗಿದೆ.

ಇ) ಸೋಮವಾರಪೇಟೆ ತಾಲ್ಲೂಕಿನ ಸುಂಟಿಕೊಪ್ಪದ ಅಂದಗೋವೆಯಲ್ಲಿ ಒಂದು ಘಟಕ ಸ್ಥಾಪಿಸಲು ಅನುಮತಿ ನೀಡಲಾಗಿದೆ. ವಿವರ ಈ ಕೆಳಕಂಡಂತಿದೆ.

ಮೆ : ಭಾರತ್‌ಮೆಟಲ್ಸ್ ಅಂದಗೋವೆ, ಕೊಡಗರಹಳ್ಳಿ, ಸೋಮವಾರಪೇಟೆ ತಾಲ್ಲೂಕು, ಮಾಲೀಕರು : ಶ್ರೀ ಕೆ. ಗೋಪು.

ಜಿಲ್ಲೆ ಕ್ರಷರ್ ಘಟಕಗಳ ವಿವರಗಳು (ಪಿ. ಎಂ. ಟಿ)

ಕ್ರ. ಸಂ.	ಘಟಕದ ಹೆಸರು ಮತ್ತು ವಿಳಾಸ	ನೋಂದಣಿ ಸಂಖ್ಯೆ ಮತ್ತು ದಿನಾಂಕ	ಕಟ್ಟಡದ ಮೇಲಿನ ಬಂಡವಾಳ	ಯಂತ್ರಗಳ ಮೇಲಿನ ಬಂಡವಾಳ	ಚಟುವಟಿಕೆ	ಉದ್ಯೋಗ	ಉತ್ಪಾದನಾ	ಜಿಲ್ಲೆ ಕಷರ್‌ಗಳ ಅನುಮತಿ ಇರುವವರ ಹೆಸರು.
1.	ಮೆ : ಕಿರಣಿ ಸ್ಟೋನ್ ಕ್ರಷರ್ ಸರ್ವೆ ನಂ: 31 : 221 ಹಾನಗಲ್ಲು ಗ್ರಾಮ ಮತ್ತು ಅಂಚೆ ಸೋಮವಾರ ಪೇಟೆ ತಾಲ್ಲೂಕು	08:08:08048: ದಿ : 12-09-90	0.50	2.21	ಜಿಲ್ಲೆ ಕ್ರಷರ್	8	11-09-90	ಶ್ರೀ ಎಸ್. ಎಲ್ ಶಂಕರ್
2.	ಲಿಸ್ಟನ್ ಇಂಡಸ್ಟ್ರೀಸ್, ನಂ : 145, ಗಾಂಧಿನಗರ, ಪಿರಾಜಪೇಟೆ.	08:08:02371: ದಿ : 19-03-93	ಮೂವಿಂಗ್ ಟೈಪ್	1.22	ಜಿಲ್ಲೆ ಕ್ರಷರ್	4	17-10-90	ಶ್ರೀ ಎ. ಸಿ. ಚಾರ್ಲ್ಸ್
3.	ಅನ್ನಪೂರ್ಣ ಇಂಡಸ್ಟ್ರೀಸ್, ಮಹದೇಶ್ವರ ಬ್ಲಾಕ್ ಸೋಮವಾರಪೇಟೆ.	08:08:02416: ದಿ : 06-10-93	ಲೀಸ್	15.23	ಜಿಲ್ಲೆ ಕ್ರಷರ್	31	10-09-93	ಶ್ರೀ ಆರ್. ಚಿನ್ನಸ್ವಾಮಿ
4.	ಭಾರತ್ ಮೆಟಲ್ಸ್, ಹೊಸಕೋಟೆ ಕೊಡಗರ ಹಳ್ಳಿ ಸೋಮವಾರಪೇಟೆ ತಾಲ್ಲೂಕು	08:08:02420: ದಿ : 08-10-93	ಲೀಸ್	2.00	ಜಿಲ್ಲೆ ಕ್ರಷರ್	34	30-05-93	ಮ್ಯಾನೇಜಿಂಗ್ ಪಾರ್ಟ್ನರ್ : ಶ್ರೀ ಕೆ.ಗೋಪು
5.	ಬಿ. ಎಸ್. ಆರ್. ಸ್ಟೋನ್ ಕ್ರಷರ್ ಕೆ.ಐ.ಎ.ಡಿ.ಬಿ. ಏರಿಯಾ,	08:08:02424: ದಿ : 10-11-93	0.80	8.60	ಜಿಲ್ಲೆ ಕ್ರಷರ್	29	15-09-93	ಶ್ರೀ ಡಿ. ಎಸ್. ಜಗದೀಶ್

6.	ಗೋಲ್ಡನ್ ಲಾಕ್ಸ್, ಸರ್ವೆ ನಂ : 142: ಹೆಗ್ಗಾಳ ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು.	08:08:00027:	1.50	40.04	ಜಿಲ್ಲಾ ಕ್ರಷರ್	30	12-12-94	ಮ್ಯಾನೇಜಿಂಗ್ ಪಾರ್ಟ್‌ನರ್ ಶ್ರೀ ಎಂ. ಸಿ. ಲಕ್ಷ್ಮಣ್
7.	ಬನಶಂಕರಿ ಗ್ರಾನೈಟ್ ಇಂಡಸ್ಟ್ರೀಯಲ್ ಏರಿಯಾ ಕುಡ್ಲೂರು - ಕುಶಾಲನಗರ	08:08:ಎ:00029 ದಿ : 22-02-95	ಇ.ಎ.	15.00	ಜಿಲ್ಲಾ ಕ್ರಷರ್	9	08-01-97	ಎ.ಪಿ. ಸಂತೋಷ ಕುಮಾರ್
8.	ಮಹಾಲಕ್ಷ್ಮಿ ಸ್ಟೋನ್ ಕ್ರಷರ್ಸ್ ಕಲತ್‌ಮಾಡು ಗ್ರಾಮ, ಹೊಸೂರು ಅಂಚೆ ವಿರಾಜಪೇಟೆ ತಾಲ್ಲೂಕು	08:08:ಎ:00042: ದಿ: 10-08-95	ಸ್ವಂತ	17.00	ಜಿಲ್ಲಾ ಕ್ರಷರ್	3	10-02-95	ಪಾಲುದಾರರು ಕೆ. ಎಂ. ಕಾವೇರಪ್ಪ
9.	ಮಂಜುನಾಥೇಶ್ವರ ಸ್ಟೋನ್ ಕ್ರಷಿಂಗ್ ಹಾರಂಗಿ ರಸ್ತೆ ಗುಮ್ಮನಕೊಲ್ಲಿ ಸರ್ವೆ ನಂ: 5:1:ಎ2 ಸೋಮವಾರಪೇಟೆ ತಾಲ್ಲೂಕು	08:08:ಎ:00081: ದಿ: 29-11-96	1.80	7.20	ಜಿಲ್ಲಾ ಕ್ರಷರ್	10	20-08-96	ಜಿ. ಸಿ. ಮೋಹನ್

ಸೂಚನೆ : ಕ್ರಮ ಸಂಖ್ಯೆ : 1 (ಒಂದನ್ನು) ಬಿಟ್ಟು ಉಳಿದೆಲ್ಲ ಘಟಕಗಳಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹೊಂದಿರುತ್ತದೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಉತ್ತರದಲ್ಲಿ ಸಣ್ಣ ಕೈಗಾರಿಕೆಗಳ ಸಚಿವರು ಎಂದು ಕೊಟ್ಟಿದ್ದಾರೆ. ಇಲ್ಲಿ ಪ್ರಶ್ನೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಸಚಿವರು, ಎಂದು ಕೊಟ್ಟಿದ್ದಾರೆ. ನಾನು ಯಾರನ್ನು ಕೇಳುವುದು? ನನಗೆ ಇದು ಸರಿ ಅನ್ನಿಸುತ್ತಿಲ್ಲ. ನಾನು ನನ್ನ ಪ್ರಶ್ನೆಯಲ್ಲಿ ರಾಜ್ಯದಲ್ಲಿ ಜೆಲ್ಲಿ ಕ್ರಷರ್‌ಗೆ ಅನುಮತಿ ನೀಡಲು ಯಾವ ಯಾವ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆ. ಎಂದು ಕೇಳಿದ್ದೇನೆ.

ಶ್ರೀ ಬಿ. ಎ. ಮೊಯ್ದೀನ್ : ನಾನೇ ಉತ್ತರ ಕೊಡುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಮಾನ್ಯ ಉಪಾಧ್ಯಕ್ಷರೇ, ಜಲ್ಲಿ ಕ್ರಷರ್‌ಗೆ ಅನುಮತಿನೀಡಲು ಯಾವ್ಯಾವ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆ ಎಂದು ಕೇಳಿದ್ದಿರಿ. ಅದಕ್ಕೆ ಉತ್ತರವಾಗಿ ಜಿಲ್ಲಿ ಕ್ರಷರ್‌ಗಳನ್ನು ಸ್ಥಾಪಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಶಾಶ್ವತ ನೋಂದಣಿ ಪ್ರಮಾಣ ಪತ್ರಗಳನ್ನು ನೀಡುತ್ತಿದೆ. ಶಾಶ್ವತ ನೋಂದಣಿ ಪ್ರಮಾಣ ಪತ್ರಗಳನ್ನು ನೀಡುವಾಗ ಇಲಾಖೆಯು ನಿಗದಿಪಡಿಸಿದ ದಾಖಲಾತಿಗಳೊಂದಿಗೆ ಗಣಿ ಮತ್ತು ಭೂಗರ್ಭ ಇಲಾಖೆಯ ಕ್ವಾರಿ ಪರವಾನಗಿ ಅಥವಾ ಬೇರೊಬ್ಬರು ಪರವಾನಿಗೆವುಳ್ಳವ ರೊಂದಿಗೆ ಸಣ್ಣ ಕೈಗಾರಿಕಾ ಘಟಕದವರು ಕಚ್ಚಾಮಾಲು ಸರಬರಾಜು ಕರಾರು ಪತ್ರ ಮಾಡಿಕೊಂಡಲ್ಲಿ ಶಾಶ್ವತ ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗುವುದು. ಎಂದು ಹೇಳಿದ್ದೀರಿ. ನಾನು ಕೇಳಿದ್ದು ಜೆಲ್ಲಿಕ್ರಷ್‌ಗೆ ಅನುಮತಿ ಕೊಡಬೇಕಾದರೆ ಸುತ್ತಮುತ್ತ ಮನೆ ಎಷ್ಟು ದೂರ ಇರಬೇಕು, ಮನೆ ದೂರವಾಗಿ ಇದ್ದರೆ ಮಾತ್ರ ಕೊಡುತ್ತೀರಾ? ಉದಾಹರಣೆಗೆ ಹೇಳುವುದಾದರೆ ರಾಮನಗರದಿಂದ ಆಚೆಗೆ ಅಲ್ಲೊಂದು ಕಡೆ ಕ್ರಷರ್ ನಡೆಯುತ್ತಿದೆ. ಸುತ್ತ ಎರಡು ಕಿಲೋಮಿಟರ್ ರಸ್ತೆ ಇದ್ದರೂ ಕೂಡ, ಎರಡು ಕಿಲೋಮಿಟರ್‌ವರೆಗೆ ಧೂಳು ಹಾರುತ್ತದೆ. ಇದರಿಂದ ಜನರಿಗೆ ಕೂಡ ಹಾನಿಯಾಗುತ್ತದೆ. ಆದ್ದರಿಂದ ಅಂದಗೊವೆ ಸ್ಥಳದಲ್ಲಿ ಅನುಮತಿ ಕೊಟ್ಟಿರುವ ಸ್ಥಳದಲ್ಲಿ 50 ಅಡಿಯಲ್ಲೇ ಮನೆಗಳು ಸುತ್ತಮುತ್ತ ಇವೆ. ಈ ಕಾರಣದಿಂದ ನೀವು ಯಾವ ನಿಯಮವನ್ನು ಪಾಲನೆ ಮಾಡುತ್ತೀರಿ? ನನಗೆ ಇದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಮೊಯ್ದೀನ್ : ನೀವು ಕೊಡಗು ಜಿಲ್ಲೆ ಬಗ್ಗೆ ಪ್ರಸ್ತಾಪಿಸಿದ್ದೀರಿ. ಕೊಡಗು ಜಿಲ್ಲೆಯಲ್ಲಿ ನಾವು ಒಟ್ಟು 9 ಜಿಲ್ಲೆ ಕ್ರಷರ್‌ಗೆ ಅನುಮತಿ ಕೊಟ್ಟಿದ್ದೇವೆ. ಈಗ ನೀವು ರಾಮನಗರ ಪ್ರಶ್ನೆ ಕೇಳಿದ್ದೀರಿ. ರಾಮನಗರದ ಮಾಹಿತಿ ನನ್ನಲ್ಲಿ ಇಲ್ಲ. ಸೋಮವಾರ ಪೇಟೆ ಬಗ್ಗೆ ಕೇಳಿ, ಹೇಳುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಅದನ್ನು ನಾನು ಉದಾಹರಣೆಯಾಗಿ ಕೋಟ್ ಮಾಡಿದೆ ಅಷ್ಟೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಬಿ. ಎ. ಮೊಯ್ದೀನ್ : ನಾನೇ ಉತ್ತರ ಕೊಡುತ್ತೇನೆ ಇದು ಹೆಜಾರ್ಡಸ್ ಇಂಡಸ್ಟ್ರೀ ಅಲ್ಲ ಆದ್ದರಿಂದ ಸಿ.ಆರ್.ಸಿ. ಕೊಡಬೇಕಾದರೆ ನಾವು ಕೂಡಲೇ ಕೊಟ್ಟುಬಿಡುತ್ತೇವೆ. ಆದರೆ ಪರ್ಮನೆಂಟ್ ಸಿ.ಆರ್.ಸಿ ಕೊಡಬೇಕಾದರೆ ಈ ಮನೆಗಳು ಮತ್ತೊಂದು ಇದೆಯೇ ಎನ್ನತಕ್ಕಂಥಾದ್ದು ಪ್ರಶ್ನೆ ಬರುತ್ತದೆ. ಒಂದುವೇಳೆ ಏನಾದರೂ ದೂರು ಬಂದರೆ ಕೂಡಲೇ ಅದನ್ನು ರದ್ದತಿ ಮಾಡತಕ್ಕಂಥ ಅಧಿಕಾರ ನಮಗೆ ಇದೆ. ಇಂತಹ ನಿರ್ದಿಷ್ಟವಾಗಿ ತೊಂದರೆಯಾಗಿದೆ ಎಂದು ದೂರುಗಳು ಬಂದಿದ್ದರೂ ಕೂಡ ನಾವು ಕಾರ್ಯಕ್ರಮ ತೆಗೆದುಕೊಂಡಿಲ್ಲ ಎನ್ನುವುದು ನಿಮ್ಮ ಉದ್ದೇಶ ಇದ್ದರೆ ದಯವಿಟ್ಟು ಅದನ್ನು ತಿಳಿಸಿ. ನಾವು ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಆ ಒಂದು ಗ್ರಾಮದಲ್ಲಿ ನೀವು ಕೊಟ್ಟಿದ್ದು ಒಂದೇ ಇದೆ. ಬಾಕಿ ಮೂರು ಇಲ್ಲಿ ಗಲ್‌ಅಗಿ ನಡೆಯುತ್ತಿವೆ. ಅದನ್ನು ತಾವು ನಿಲ್ಲಸುತ್ತೀರೋ?

ಶ್ರೀ ಬಿ. ಎ. ಮೊಯ್ದೀನ್ : ಖಂಡಿತವಾಗಿ. ಅನುಮತಿ ಇಲ್ಲದೇ ನಡೆಯುವುದಾದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಶ್ನೆ 233 (1953) ಕ್ಕೆ ಸಮಯವನ್ನು ಕೇಳಿದ್ದಾರೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಕೋಲಾರ ಜಿಲ್ಲೆಯಲ್ಲಿ ಕೆಲವು ಸ್ವಯಂಸೇವಕ ಸಂಸ್ಥೆಗಳು ಇವೆ. ಅವು ಕೇಂದ್ರಸರ್ಕಾರದ ಮತ್ತು ಅಲ್ಲಿರತಕ್ಕ ಪೋಲೀಸ್ ವ್ಯವಸ್ಥೆಗೆ ಸಂಬಂಧ ಪಟ್ಟಿರತಕ್ಕಂಥದ್ದು. ಈ ಪ್ರಶ್ನೆಗೆ ಕಾಲಾವಕಾಶ ಬೇಕಾಗುತ್ತದೆ, ಆದ್ದರಿಂದ ಸಮಯ ಕೇಳಿದ್ದೇವೆ.